# ವೈಜ್ಞಾನಿಕ ಆಡು ಸಾಕಣೆ

ಕೃಷಿಯನ್ನು ಅವಲಂಬಿತರಾಗಿರುವ ನಮ್ಮ ರಾಜ್ಯದ ರೈತರಿಗೆ ಪಶುಪಾಲನೆ ಮತ್ತು ಆಡು-ಕುರಿ ಸಾಕಣೆಯು ಮುಖ್ಯ ಲಾಭದಾಯಕ ಕಸುಬಾಗಿದೆ. ಪಶು ಪಾಲನೆಯ ನಂತರ ಆಡು ಸಾಕಣೆಯು ಒಂದು ಮುಖ್ಯ ಪರ್ಯಾಯ ಆರ್ಥಿಕ ಮೂಲವಾಗಿದೆ. ಯಾವುದೇ ತರಹದ ಪರಿಸರ ಹಾಗೂ ವಾತಾವರಣಕ್ಕೆ ಹೊಂದಿಕೊಳ್ಳುವ ಪ್ರಾಣಿ ಎಂದರೆ ಆಡು. ಆಡು ಸಾಕಣಿಯ ಉತ್ತಮ ಹಾಗೂ ನಿರಂತರ ಆದಾಯ ತರುವ ಕಸುಬಾಗಿರುವುದರಿಂದ ಇವುಗಳನ್ನು "ನಡೆದಾಡುವ ಬ್ಯಾಂಕ್" ಎಂದು ಕರೆಯುತ್ತಾರೆ. ಒಂದು ಆಕಳು ತಿನ್ನುವಷ್ಟು ಆಹಾರದಲ್ಲಿ 10 ಆಡುಗಳನ್ನು ಮೇಯಿಸಬಹುದು. ಆಡುಗಳು ಅನುಪಯುಕ್ತ ವಸ್ತುಗಳನ್ನು ಉಪಯೋಗಿಕೊಂಡು ಪೌಷ್ಠಿಕ ಆಹಾರ (ಹಾಲು, ಮಾಂಸ), ಚರ್ಮ ಹಾಗು ಗೊಬ್ಬರವನ್ನು ಪಡೆಯಬಹುದು. ಆದ್ದರಿಂದ ಇವುಗಳನ್ನು "ಬಡವರ ಬಂಧು" ಅಥವಾ "ಬಡವರ ಹಸು" ಎಂದು ಕರೆಯಲಾಗುತ್ತದೆ.



### ಆಡು ಸಾಕಣಿಕೆಯ ಪ್ರಯೋಜನಗಳು:

- ಆಡು ಬಹು ಉದ್ದೇಶಿತ ಪ್ರಾಣಿಯಾಗಿದ್ದು, ಇದು ಹಾಲು, ಮಾಂಸ ಮತ್ತು ಗೊಬ್ಬರವನ್ನು ಉತ್ಪಾದಿಸುತ್ತದೆ.
- ಇದು ಮಿಶ್ರ ಕೃಷಿಗೆ ಸರಿಯಾಗಿ ಹೊಂದಿಕೊಳ್ಳುತ್ತದೆ.
- ಭೂಮಿರಹಿತ ಕೃಷಿ ಕಾರ್ಮಿಕರು, ಮಹಿಳೆಯರು ಮತ್ತು ಮಕ್ಕಳು ಸಹ ಆಡುಗಳನ್ನು ಬೆಳೆಸಬಹುದು.
- ಇದು ಎಲ್ಲಾ ತರಹದ ಎಲೆಗಳು, ಪೊದೆಗಳು ಹಾಗೂ ಅಡಿಗೆ ತ್ಯಾಜ್ಯಗಳನ್ನು ತಿಂದು ಬದುಕುತ್ತವೆ.

- ಆಡು ಸಾಕಣೆಗೆ ಹೆಚ್ಚು ಹಣ ವ್ಯಯಿಸಬೇಕಾಗಿಲ್ಲ.
- ಆಡಿನ ಮಾಂಸ ಕಡಿಮೆ ಕೊಬ್ಬನ್ನು ಹೊಂದಿರುತ್ತದೆ ಮತ್ತು ಬೇಡಿಕೆ ಹೆಚ್ಚಿದೆ.
- ಆಡು ಸಾಕಣೆಯಿಂದ ವರ್ಷವಿಡೀ ಕೆಲಸ ಮತ್ತು ಆದಾಯವನ್ನು ಪಡೆಯಬಹುದು.
- ಆಡುಗಳು 15 ರಿಂದ 17 ತಿಂಗಳ ವಯಸ್ಸಿನಲ್ಲಿ ಹಾಲು ಕೊಡಲು ಪ್ರಾರಂಭಿಸುತ್ತವೆ ಹಾಗೂ ಮಾಂಸದ ಸಲುವಾಗಿ 5 ರಿಂದ 6 ತಿಂಗಳಲ್ಲಿ ಬೆಳೆದು ತಯಾರಾಗುತ್ತವೆ.
- ತ್ವರಿತವಾಗಿ ಸಂತಾನೋತ್ಪತ್ತಿ ಮಾಡುತ್ತವೆ. (ಎರಡು ವರ್ಷಕ್ಕೆ ಮೂರು ಸಲ) ಪ್ರತಿ ಬಾರಿ 1 ರಿಂದ 2 ಮರಿ ಹಾಕುತ್ತವೆ.

### ಆಡು ತಳಿಗಳು ಮತ್ತು ಗುರುತಿಸುವುದು:

ಆಡುಗಳನ್ನು ಸಾಕುವ ಉದ್ಧೇಶಕ್ಕೆ ಅನುಸಾರವಾಗಿ 3 ವಿಧವಾಗಿ ವಿಂಗಡಿಸಬಹುದು. ಅವುಗಳೆಂದರೆ, ಮಾಂಸೋತ್ಪಾದನೆಗೆಂದು ಬೆಳೆಸುವ ತಳಿಗಳು, ಹಾಲು ಉತ್ಪಾದನೆಗೆಂದು ಬೆಳೆಸುವ ತಳಿಗಳು ಮತ್ತು ಹಾಲು ಮತ್ತು ಮಾಂಸದ ಉತ್ಪಾದನೆಯ ತಳಿಗಳು. ರೈತರು ತಮ್ಮ ಹವಾಮಾನ ಮತ್ತು ವಸತಿಯ ವ್ಯವಸ್ಥೆಗೆ ಹೊಂದಿಕೊಳ್ಳುವ ಸೂಕ್ತವಾದ ತಳಿಯನ್ನು ಆಯ್ಕೆ ಮಾಡಬೇಕು. ಕರ್ನಾಟಕದಲ್ಲಿ ಮುಖ್ಯ ತಳಿಗಳೆಂದರೆ ಡೆಕ್ಕಣಿ, ಉಸ್ಮಾನಾಬಾದಿ, ಮಲಬಾರಿ, ನಂದಿದುರ್ಗ, ಬಿದರಿ ಹಾಗೂ ಅನೇಕ ದೇಶಿ ತಳಿಗಳು ಕಂಡು ಬರುತ್ತವೆ. ಮಧ್ಯಮ ಗಾತ್ರ, ಮೈಕಟ್ಟು ಹೊಂದಿದ್ದು, ಕಪ್ಪು, ಕಂದು ಅಥವಾ ಬಿಳಿ ಬಣ್ಣದ್ದಾಗಿವೆ.

### ದಕ್ಷಿಣ ಕನ್ನಡ ಜಿಲ್ಲೆಗೆ ಹೊಂದಿಕೊಳ್ಳುವ ಪ್ರಮುಖ ತಳಿ:



ಮಲಬಾರಿ ಆಡಿನ ತಳಿಯು ಕೇರಳಾದ ಕ್ಯಾಲಿಕಟ್, ವಯನಾಡು, ಕಣ್ಣೂರು ಹಾಗೂ ಮಲಪುರಂ ಪ್ರದೇಶಕ್ಕೆ ಸೇರಿದಾಗಿದೆ. ಮುಖ್ಯವಾಗಿ ಮಾಂಸದ ಉದ್ದೇಶಕ್ಕಾಗಿ ಸಾಕುವ ತಳಿಯಾಗಿದೆ. ಮಲಬಾರಿ ಆಡುಗಳು ಬೇರೆ ಬೇರೆ ಪರಿಸರ ಹಾಗೂ ವಾತಾವರಣಗಳಿಗೆ ಹೊಂದಿಕೊಳ್ಳುವ ಗುಣ ಹೊಂದಿರುತ್ತದೆ. ಇವು ಮಧ್ಯಮಗಾತ್ರದ ಮೈಕಟ್ಟು ಹೊಂದಿದ್ದು ಕಪ್ಪು, ಕಂದು ಅಥವಾ ಬಿಳಿ ಬಣ್ಣದಾಗಿವೆ. ಇವುಗಳ ಹಾಲು ಉತ್ಪಾದನೆ ಸಾಧಾರಣವಾಗಿದ್ದು, ಉತ್ತಮ ಮಾಂಸವನ್ನು ಕೊಡುವ ಉಭಯ ತಳಿ ಆಗಿರುತ್ತದೆ. ಪ್ರಾಯಕ್ಕೆ ಬಂದ ಗಂಡು ಮೇಕೆ ಸುಮಾರು 41 ಕೆ.ಜಿ. ಹಾಗೂ ಹೆಣ್ಣು 30 ಕೆ.ಜಿಯಷ್ಟು ತೂಕವನ್ನು ಗಳಿಸುತ್ತದೆ.

ಈ ತಳಿಯು ಬೇಗನೆ ಪ್ರಾಯಕ್ಕೆ ಬರುತ್ತದೆ ಮತ್ತು 9-12 ತಿಂಗಳಿಗೆ ಗರ್ಭಧರಿಸುವ ಸಾಮರ್ಥ್ಯವನ್ನು ಹೊಂದಿದೆ. ಇವು ಉತ್ತಮ ಸಂತಾನ ಸಮೃದ್ಧಿಯನ್ನು ಹೊಂದಿದ್ದು ಶೇ. 50 ರಷ್ಟು ಅವಳಿ, 25 ರಷ್ಟು ತ್ರಿವಳಿ ಹಾಗು 5 ರಷ್ಟು ನಾಲ್ಕು ಮರಿಯನ್ನು ಹಾಕುವ ಸಾಮರ್ಥ್ಯ ಹೊಂದಿದೆ. ಈ ಮೇಕೆಗಳು ದಿನಕ್ಕೆ ಅರ್ಧ ಲೀಟರ್‌ನಿಂದ ಒಂದೂವರೆ ಲೀಟರ್ ಹಾಲು ನೀಡುತ್ತದೆ. ಮಲಬಾರಿ ಮೇಕೆಗಳ ಮಾಂಸವು ಕಡಿಮೆ ಕೊಬ್ಬಿನಾಂಶಕ್ಕೆ ಹೆಸರುವಾಸಿಯಾಗಿದೆ. ಈ ತಳಿಯ ಮೈತೂಕ ಮೂರು ತಿಂಗಳಿಗೆ ಸುಮಾರು 5.73 ಕೆ.ಜಿ, ಆರು ತಿಂಗಳಿಗೆ 9.20 ಕೆ.ಜಿ ಹಾಗೂ ಒಂಭತ್ತು ತಿಂಗಳಿಗೆ 20.5 ಕೆ.ಜಿ ತೂಗುತ್ತದೆ.

## ವಸತಿ ಮತ್ತು ಸಾಮಾನ್ಯ ನಿರ್ವಹಣೆ:

ಆಡಿಗೆ ಸಾಮಾನ್ಯವಾಗಿ ವಸತಿ ಸೌಕರ್ಯಕ್ಕಾಗಿ ಹೆಚ್ಚು ಖರ್ಚಿನಿಂದ ನಿರ್ಮಿಸಿದ ಪಕ್ಕಾ ಮನೆಗಳ ಅವಶ್ಯಕತೆಯಿರುವುದಿಲ್ಲ. ಇತ್ತೀಚೆಗೆ ಸುಧಾರಿತ ಪದ್ಧತಿಯಲ್ಲಿ ಆಡುಗಳನ್ನು ಒಂದೇ ಸ್ಥಳದಲ್ಲಿ ಕಟ್ಟಿ ಜೋಪಾನ ಮಾಡುವ ಪದ್ಧತಿ ಜನಪ್ರಿಯವಾಗಿದೆ. ಆಡುಗಳ ಕಟ್ಟಡವು ಪೂರ್ವ ಪಶ್ಚಿಮ ದಿಕ್ಕಿಗೆ ಇರುವಂತೆ ನಿರ್ಮಿಸಬೇಕು. ಆಡುಗಳು ಎತ್ತರ ಪ್ರದೇಶದಲ್ಲಿ ವಾಸಿಸಲು ಬಯಸುತ್ತವೆ. ಹಳ್ಳಿಗಳಲ್ಲಿ ಸಿಗುವ ಬಿದಿರುಗಳು ಮತ್ತು ಮರದ ಪಟ್ಟಿಗಳನ್ನು ಬಳಸಿ ಅಟ್ಟಣಿಗೆಯನ್ನು ನಿರ್ಮಿಸಬಹುದು. ಈ ಅಟ್ಟಣಿಗೆಯು ನೆಲದಿಂದ 2-4 ಅಡಿ ಎತ್ತರದಲ್ಲಿ ಇರಬೇಕು. ಈ ವ್ಯವಸ್ಥೆಯಿಂದ ಮೇಕೆಗಳ ಮಲಮೂತ್ರವು ಅಟ್ಟಣಿಗೆಯಲ್ಲಿ ನಿಲ್ಲದೆ, ನೆಲಕ್ಕೆ ಬೀಳುತ್ತದೆ ಹಾಗೂ ಗೂಡಿನ ಸ್ವಚ್ಛತೆ ಕಾಪಾಡಲು ಸಹಕರಿಸುತ್ತದೆ. ಹಟ್ಟಿಯ ನೆಲವನ್ನು ಒಣದಾಗಿಸಬೇಕು ಮತ್ತು ಪ್ರತಿದಿನ ಸ್ವಚ್ಛತೆಯನ್ನು ಕಾಪಾಡಬೇಕು. ಕುಡಿಯಲು ಸ್ವಚ್ಛ ನೀರಿನ ಸೂಕ್ತ ವ್ಯವಸ್ಥೆ ಮತ್ತು ಮೇವು ದಾಣಿ ಹಾಕಲು ಗೂದಲಿನ ವ್ಯವಸ್ಥೆ ಮಾಡಬೇಕು. ಹಟ್ಟಿಯಲ್ಲಿ/ಕಟ್ಟಡದಲ್ಲಿ ಹೆಚ್ಚು ಗಾಳಿಯಾಡುವಂತೆ ಅರ್ಧದಷ್ಟು ಗೋಡೆ ಮತ್ತು ಉಳಿದ ಭಾಗವನ್ನು ತಂತಿಯ ಜಾಲಿ ಇಲ್ಲವಾದರೆ ಬಟ್ಟೆ ಹೊದಿಕೆಯನ್ನು ತಯಾರಿಸಬೇಕು. ಪ್ರತಿ ವಯಸ್ಕ ಆಡಿಗೆ 16 ಚ. ಅಡಿಯಂತೆ ಅಂದರೆ 4x4 ಅಡಿ ಜಾಗ ಹಾಗೂ ಮರಿಗಳಿಗೆ 2x2 ಅಡಿ ಜಾಗ ಅವಶ್ಯಕವಾಗಿರುತ್ತದೆ. ವಸತಿಯ ಸುತ್ತಲೂ ನೀರು ನಿಲ್ಲದೆ ಹರಿದು ಹೋಗುವಂತಿರಬೇಕು.





### ಆಹಾರ ಪದ್ಧತಿ:

ಆಡುಗಳು ವಿವಿಧ ಬಗೆಯ ಗಿಡಗಂಟಿಗಳನ್ನು ತಿಂದು ತಮ್ಮ ಆಹಾರದ ಅವಶ್ಯಕತೆಯನ್ನು ಪೂರೈಸಿಕೊಳ್ಳುತ್ತವೆ. ಆಡುಗಳನ್ನು ಉತ್ಪತ್ತಿಗಾಗಿ ಹಿಂಡಿನಲ್ಲಿ ಸಾಕಿದಾಗ ಮೇಯಿಸುವ ಜೊತೆಗೆ ದಾಣಿ ಮಿಶ್ರಣ ಮತ್ತು ಹಸಿರು ಮೇವನ್ನು ಪೂರೈಸಬೇಕಾಗುತ್ತದೆ. ಸಮತೋಲನ ಆಹಾರದ ಅವಶ್ಯಕತೆಯು ಮೇಕೆಗಳ ತೂಕ, ವಯಸ್ಸು, ಬೆಳವಣಿಗೆ ಹಾಗೂ ಹಾಲು ನೀಡುವ ಪ್ರಮಾಣದ ಮೇಲೆ ಅವಲಂಬಿತವಾಗಿರುತದೆ. ಆಡು ದ್ವಿದಳ ಮೇವು ಮತ್ತು ಗಿಡ ಕಂಟಿಗಳ ಎಲೆ, ಚಿಗುರು ಮತ್ತು ಕಾಯಿಗಳನ್ನು ತಿನ್ನಲು ಇಷ್ಟಪಡುತ್ತದೆ. ಸ್ಥಳಿಯ ಹುಲ್ಲು, ಹಲಸಿನ ಎಲೆ ,ತೆಂಗಿನ ಗರಿಗಳು, ಬಾಳೆಎಲೆ ಇತ್ಯಾದಿಗಳನ್ನು ತಿನ್ನಿಸಬಹುದು. ಆಡು ಹೊಲಸಾದ ಮೇವನ್ನು ತಿನ್ನುವುದಿಲ್ಲ. ಆಡು ನೆಲದ ಮೇಲೆ ಮೇಯದೆ ಸ್ವಲ್ಪ ಎತ್ತರದ ಮೇಲೆ ಎಲ್ಲಾತರಹದ ಗಿಡಗಂಟಿಗಳ ಎಲೆಗಳನ್ನು ತಿನ್ನುತ್ತದೆ. ಸಾಧಾರಣವಾಗಿ ಒಂದು ಬಲಿತ ಆಡಿಗೆ 5 ಕಿಲೋ ಮೇವು ಹುಲ್ಲು ಮತ್ತು 0.2 ರಿಂದ 0.7 ಕಿಲೋ ದಾಣಿ ಮಿಶ್ರಣವನ್ನು ಪ್ರತಿನಿತ್ಯ ಕೊಡಬೇಕು.

### ಆಹಾರ ತಯಾರಿಕೆ– ಪದಾರ್ಥಗಳನ್ನು ಈ ಕೆಳಗಿನ ಪ್ರಮಾಣದಲ್ಲಿ ಬೆರೆಸಬೇಕು (ಪ್ರತಿ 100 ಕೆಜಿಗೆ):

| ಆಹಾರ ಪದಾರ್ಥಗಳು | ಪ್ರಮಾಣ (%) |
|---|---|
| ಧಾನ್ಯದ ನುಚ್ಚುಗಳು<br>(ಜೋಳ, ಗೋವಿನ ಜೋಳ, ನವಣೆ, ಸಜ್ಜೆ) | 40 |
| ತೌಡುಗಳು<br>(ಅಕ್ಕಿತೌಡು, ಅವಲಕ್ಕಿ ತೌಡು , ಗೋದಿ ತೌಡು) | 25 |
| ಹಿಂಡಿಗಳು<br>(ಹತ್ತಿಕಾಳು ಹಿಂಡಿ, ಸೂರ್ಯಕಾಂತಿ, ಸಾಸಿವೆ, ಕುಸುಬೆ) | 20 |
| ದ್ವಿದಳ ಧಾನ್ಯಗಳ ನುಚ್ಚುಗಳು<br>(ಕಡಲೆ, ಹೆಸರು, ತೊಗರಿ, ಹುರುಳಿ) | 12 |
| ಲವಣ ಮಿಶ್ರಣ | 2 |
| ಉಪ್ಪು | 1 |

### ಸಮತೋಲನ ಆಹಾರ ನೀಡುವ ಪ್ರಮಾಣ:

| ಅ.ಸಂ. | ವಯಸ್ಸು | ಸ್ಥೂಲ ಆಹಾರ | ಸಮತೋಲನ ಆಹಾರ |
|---|---|---|---|
| 1 | ಹುಟ್ಟಿದ ದಿನದಿಂದ 1 ತಿಂಗಳವರೆಗೆ | – | ತಾಯಿಯ ಹಾಲು |
| 2 | 1–3 ತಿಂಗಳು | – | ತಾಯಿಯ ಹಾಲಿನ ಜೊತೆಗೆ 50 ಗ್ರಾಂ |
| 3 | 3–9 ತಿಂಗಳು | ಮೇವು | 100–200 ಗ್ರಾಂ |
| 4 | ತಾಯಿ ಆಡು | ಮೇವು | 200–300 ಗ್ರಾಂ |
| 5 | ಹೋತ | ಮೇವು | 200–250 ಗ್ರಾಂ |

### ಆಡುಗಳ ಸಂತಾನೋತ್ಪತ್ತಿ:

ಸಂತಾನೋತ್ಪತ್ತಿಗೆ ತೊಡಗಿಸಿಕೊಳ್ಳುವ ಹೆಣ್ಣು ಆಡುಗಳ ದೈಹಿಕ ಸ್ಥಿತಿಯು ಉತ್ತಮವಾಗಿದ್ದು, ಆರೋಗ್ಯಪೂರ್ಣವಾಗಿರಬೇಕು. ಸಾಮಾನ್ಯವಾಗಿ ಆಡುಗಳು 8 ರಿಂದ 10 ತಿಂಗಳಲ್ಲಿ ಪ್ರೌಢಾವಸ್ಥೆಗೆ ಬರುತ್ತವೆ ಮತ್ತು 10 ರಿಂದ 12 ತಿಂಗಳ ವಯಸ್ಸಿನಲ್ಲಿ ಗರ್ಭಧರಿಸುತ್ತವೆ. ಆನಂತರ ಪ್ರತಿ 18–21 ದಿನಗಳಿಗೊಮ್ಮೆ ಬೆದೆಗೆ ಬರುತ್ತವೆ. ಆಡು ಗರ್ಭಧರಿಸಿದ ಮೇಲೆ ಸರಾಸರಿ 150 ದಿನಗಳಲ್ಲಿ ಮರಿ ಹಾಕುತ್ತದೆ. ಹೆಣ್ಣು ಆಡು ಬೆದೆಗೆ ಬಂದ 1 ರಿಂದ 15 ಗಂಟೆಗಳ ಅವಧಿಯಲ್ಲಿ ಹೋತದಿಂದ ಗರ್ಭಧಾರಣೆ ಮಾಡಿಸಬೇಕು.

### ಹೋತಗಳ ಪಾಲನೆ:

ಒಂದು ಒಳ್ಳೆಯ ಬಲಿತ ಹೋತವನ್ನು ಸುಮಾರು 20–25 ಹೆಣ್ಣು ಆಡುಗಳಿಗೆ ಗರ್ಭಧರಿಸಲು ಬಳಸಬಹುದು. ಪ್ರತಿ ಮೂರು ವರ್ಷಗಳಿಗೊಮ್ಮೆ ಹೋತ ಬದಲಾಯಿಸುವುದು ಒಳ್ಳೆಯದು. ಇಲ್ಲದಿದ್ದರೆ ಒಳಸಂಕರಣ ಸಮಸ್ಯೆ ಕಾಣಿಸಿಕೊಂಡು ಅನಾರೋಗ್ಯವಂತ ಮರಿಗಳು ಹುಟ್ಟುತ್ತವೆ. ಒಂದು ಹಟ್ಟಿಯಲ್ಲಿ 2 ಹೋತಗಳನ್ನು ಸಾಕಬೇಕು ಮತ್ತು ಅವೆರಡರ ಆಕಾರ/ತೂಕ ಬೇರೆ ಬೇರೆಯಾಗಿರಬೇಕು. ಗರ್ಭಧರಿಸುವಾಗ ಮತ್ತೆ ಅದೇ ಹೋತವನ್ನು ಉಪಯೋಗಿಸಬಾರದು.



### ಗರ್ಭಧರಿಸುವ ಆಡುಗಳ ಜೋಪಾಸನೆ:

ಗರ್ಭಧರಿಸಿದ ಸುಮಾರು 150 ದಿನಗಳಲ್ಲಿ ಆಡುಗಳು ಮರಿ ಹಾಕುತ್ತವೆ. ಮರಿ ಹಾಕುವ ಮುನ್ನ ಪದೇಪದೇ ಮಲಗುತ್ತದೆ ಮತ್ತು ಏಳುತ್ತವೆ. ಕೆಚ್ಚಲು ಬಿಗಿದಿರುತ್ತದೆ. ಮೊಲೆ ತೊಟ್ಟುಗಳಲ್ಲಿ ಹಾಲು ತುಂಬಿಕೊಂಡಿರುತ್ತದೆ. ಯೋನಿಯಿಂದ ಹಳದಿ ಬಣ್ಣದ ಬಿಳಿ ಲೋಳೆ ಸ್ರವಿಸುತ್ತದೆ. ಗರ್ಭದ ಚೀಲ ಒಡೆಯುತ್ತದೆ. ಆಗ ಮರಿ ಹೊರಗೆ ಬರುತ್ತದೆ. ಎರಡು ಗಂಟೆ ಒಳಗೆ ಮರಿ ಹಾಕದಿದ್ದಲ್ಲಿ ಪಶು ವೈದ್ಯರನ್ನು ಕರೆಸಬೇಕು. ಮರಿ ಹಾಕಿದ ಮೇಲೆ ಮಾಸು ಬೀಳುತ್ತದೆ. ಅದನ್ನು ದೂರ ಎಸೆಯಬೇಕು. ಕೆಲವು ವೇಳೆ 8–12 ತಾಸುಗಳಲ್ಲಿ ಮಾಸು ಬೀಳದಿದ್ದರೆ ಪಶುವೈದ್ಯರ ಸಹಾಯ ಪಡೆಯಬೇಕು. ಮರಿ ಹಾಕಿದ ನಂತರ ಹೆಣ್ಣು ಆಡುಗಳು ಮತ್ತೆ 3–5 ತಿಂಗಳುಗಳಲ್ಲಿ ಬೆದೆಗೆ ಬರುತ್ತವೆ.

### ಮರಿಗಳ ಜೋಪಾನ:

ಆಡುಗಳು ಸಾಮಾನ್ಯವಾಗಿ ಒಂದು ಕೆಲಮೊಮ್ಮೆ 2 ರಿಂದ 3 ಮರಿಗಳನ್ನು ಹಾಕುತ್ತವೆ. ಒಂದಕ್ಕಿಂತ ಹೆಚ್ಚು ಮರಿಗಳಿದ್ದಲ್ಲಿ, ಒಂದು ಮರಿ ಹಾಕಿದ 15–20 ನಿಮಿಷಗಳಲ್ಲಿ ಉಳಿದ ಮರಿಗಳು ಹೊರ ಬರುತ್ತವೆ. ಮರಿ ಹಾಕಿದ ಮೇಲೆ ಮರಿಗಳನ್ನು ನೆಕ್ಕಿ ಸ್ವಚ್ಛಗೊಳಿಸುತ್ತದೆ. ಹಾಗೆ ಮಾಡದ ಪಕ್ಷದಲ್ಲಿ ಮರಿಗಳನ್ನು ಒಣ ಮತ್ತು ಸ್ವಚ್ಛ ಬಟ್ಟೆಯಿಂದ ಒರೆಸಬೇಕು.

ಹೊಕ್ಕುಳು ಬಳ್ಳಿಯನ್ನು 2.5 ಸೆಂ.ಮೀ. ಅಂತರದಲ್ಲಿ ಕಟ್ಟಿ, ಕತ್ತರಿಸಿ, ಟಿಂಕ್ಚರ್ ಐಯೋಡಿನ್ ದ್ರಾವಣವನ್ನು ಹಚ್ಚಬೇಕು. ಮೂಗಿನ ಸುತ್ತಲಿರುವ ಲೋಳೆಯನ್ನು ಚೆನ್ನಾಗಿ ತೆಗೆದು ಉಸಿರಾಡಲು ಅನುಕೂಲ ಮಾಡಿಕೊಡಬೇಕು. ಹುಟ್ಟಿದ ಮರಿಗಳಿಗೆ ಗಿಣ್ಣು ಹಾಲನ್ನು ಹುಟ್ಟಿದ ಅರ್ಧಗಂಟೆಯೊಳಗೆ ಮತ್ತು ನಂತರ ಮೊದಲ 5 ದಿನಗಳವರೆಗೆ ಕುಡಿಸಬೇಕು. ಒಂದಕ್ಕಿಂತ ಹೆಚ್ಚು ಮರಿಗಳಿದ್ದಲ್ಲಿ ಹಾಲು ಕುಡಿಸುವುದರಲ್ಲಿ ಸಹಾಯ ಮಾಡಬೇಕು. ಕೆಚ್ಚಲಲ್ಲಿ ಹಾಲು ಕಡಿಮೆಯಿದ್ದಲ್ಲಿ ಹಸು ಹಾಲನ್ನು ಬಾಟಲಿನ ಸಹಾಯದಿಂದ ಒದಗಿಸಬೇಕು. ಹಾಲುಣಿಸುವ ಪ್ರಕ್ರಿಯೆಯು ಮೂರು ತಿಂಗಳವರೆಗೆ ಮುಂದುವರೆಸಬೇಕು. ಮರಿಗಳು ಹುಟ್ಟಿದಾಗ 1.9 ರಿಂದ 3.5 ಕಿ.ಗ್ರಾಂ. ದೇಹದ ತೂಕವನ್ನು ಹೊಂದಿರುತ್ತವೆ. ಬೆಳವಣಿಗೆಗೆ ತಕ್ಕಂತೆ ಹಸಿ ಮತ್ತು ಒಣ ಮೇವು ಕೊಡಬೇಕು. ಇದಾದ ನಂತರ ಮರಿಗಳನ್ನು ತಾಯಿಯಿಂದ ಮೂರು ತಿಂಗಳ ನಂತರ ಬೇರ್ಪಡೆ ಮಾಡಿಸಬಹುದು.



### ಆಡುಗಳಲ್ಲಿ ರೋಗ ನಿರೋಧಕ ಲಸಿಕೆಗಳನ್ನು ನೀಡುವ ಕ್ರಮಗಳು:

| ರೋಗ | ವಯಸ್ಸು | ಬೂಸ್ಟರ್ | ಲಸಿಕೆ ಪದ್ಧತಿ ಪ್ರಮಾಣ | ಶರಾ |
|---|---|---|---|---|
| ಕಾಲುಬಾಯಿ ಬೇನೆ | 6–8 ವಾರ | 6–9 ತಿಂಗಳಿಗೊಮ್ಮೆ | 1 ಮಿ.ಲೀ. ಚರ್ಮದ ಕೆಳಗೆ ಅಥವಾ ಮಾಂಸದಲ್ಲಿ | – |
| ಗಂಟಲು ಬೇನೆ | 3–4 ತಿಂಗಳು | ವರ್ಷಕ್ಕೊಮ್ಮೆ | 1 ಮಿ.ಲೀ. ಚರ್ಮದ ಕೆಳಗೆ | ಮೇ–ಜೂನ್ |
| ಆಡುಗಳ ಸಿಡುಬು | 3 ತಿಂಗಳು | – | 1 ಮಿ.ಲೀ. ಚರ್ಮದ ಕೆಳಗೆ | – |
| ಧನುರ್ವಾಯು | 3–4 ತಿಂಗಳು | 6 ತಿಂಗಳಿಗೆ ನಂತರ ವರ್ಷಕ್ಕೊಮ್ಮೆ | 0.5–1 ಮಿ.ಲೀ. ಚರ್ಮದ ಕೆಳಗೆ ಅಥವಾ ಮಾಂಸದಲ್ಲಿ | – |
| ಅಂಥ್ರಾಕ್ಸ್ | 4–6 ತಿಂಗಳು | ವರ್ಷಕ್ಕೊಮ್ಮೆ | 0.5 ಮಿ.ಲೀ. ಬಾಲದ ಚರ್ಮದ ಕೆಳಗೆ | ರೋಗ ಪ್ರಚಲಿತವಿರುವ ಪ್ರದೇಶಗಳಲ್ಲಿ ಮಾತ್ರ |
| ಕರಳು ಬೇನೆ | 3–4 ತಿಂಗಳು | 15 ದಿನಕ್ಕೆ ಮತ್ತೊಮ್ಮೆ ನಂತರ ವರ್ಷಕ್ಕೆ ಒಂದು ಬಾರಿ | 2.5 ಮಿ.ಲೀ. ಚರ್ಮದ ಕೆಳಗೆ | ಮೊದಲನೆ ಎರಡು ಲಸಿಕೆ ಅಗಸ್ಟ್‌ಗಿಂತ ಮೊದಲು |
| ಪಿಪಿಆರ್ | 3 ತಿಂಗಳು | ವರ್ಷಕ್ಕೊಮ್ಮೆ | 1 ಮಿ.ಲೀ. ಚರ್ಮದ ಕೆಳಗೆ | ಗಬ್ಬದ ಕುರಿಗಳಿಗೆ ಕೊಡಬಾರದು |